ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Office of the Registrar(Evaluation), Central College Campus, Dr.Ambedkar Veedhi,
Ph.No: 080-22295559, E-Mail ID: registrarevlubcu@gmail.com

NO.BCU/EX/UG/NEP/2022-23 Date:19.09.2022

## ಸುತ್ತೋಲೆ

**ವಿಷಯ: ಸ್ನಾತಕ ಕೋರ್ಸುಗಳ 2ನೇ ಸೆಮಿಸ್ಟರಿನ NEP Scheme ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕಗಳನ್ನು ನಿಗಧಿಪಡಿಸುವ ಕುರಿತು**

****

2021–22ನೇ ಸಾಲಿನ 2ನೇ ಸೆಮಿಸ್ಟರಿನ NEP Scheme ಸ್ನಾತಕ ಕೋರ್ಸುಗಳ ವಿದ್ಯಾರ್ಥಿಗಳ ಪರೀಕ್ಷೆಗಳು ಶೈಕ್ಷಣಿಕ ವೇಳಾಪಟ್ಟಿ ಅನುಸಾರ ದಿನಾಂಕ 26.09.2022 ರಿಂದ ನಡೆಸಬೇಕಾಗಿದ್ದು, ಇಲ್ಲಿಯವರೆಗೂ ಕಾಲೇಜಿನಿಂದ ಕೋರ್ಸುಗಳು ಮ್ಯಾಪ್ ಆಗುವ ಮತ್ತು ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸುವ ಪ್ರಕ್ರಿಯೆ ಇನ್ನು ನಡೆಯುತ್ತಿದ್ದು, ಕೇವಲ 71% ಮಾತ್ರ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿರುತ್ತಾರೆ. **ವಿಶ್ವವಿದ್ಯಾಲಯದಿಂದ ಪರೀಕ್ಷಾ ಶುಲ್ಕ ಪಾವತಿಸಲು ಮೂರು ಬಾರಿ ದಿನಾಂಕಗಳನ್ನು ವಿಸ್ತರಿಸಲಾಗಿದ್ದು, ಇಲ್ಲಿಯವರೆಗೂ ಇನ್ನೂ ಕೆಲವು ಕಾಲೇಜಿನಿಂದ ಮ್ಯಾಪಿಂಗ್ ಪ್ರಕ್ರಿಯೆ ಮುಗಿಯದೆ ಇರುವ ವಿಷಯ ಗಮನಕ್ಕೆ ಬಂದಿರುತ್ತದೆ.** ಅಂತಿಮವಾಗಿ ವಿಶ್ವವಿದ್ಯಾಲಯದಿಂದ ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕ 24.09.2022ರವರೆಗೆ ರೂ.200/– ದಂಡ ಶುಲ್ಕದೊಂದಿಗೆ ದಿನಾಂಕ 27.09.2022ರವರೆಗೆ ಹಾಗೂ ರೂ.1000/– ದಂಡ ಶುಲ್ಕದೊಂದಿಗೆ ದಿನಾಂಕ 29.09.2022ರವರೆಗೆ ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ನಿಗಧಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸಲು ಆಯಾ ಕಾಲೇಜಿಗಳ ಪ್ರಾಂಶುಪಾಲರು ಅತಿ ಶಿಸ್ತಿನ ಕ್ರಮವನ್ನು ಕೈಗೊಳ್ಳಲು ಸೂಚಿಸಲಾಗಿದೆ. ನಿಗಧಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸದೇ ಇರುವಂತಹ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ರೀತಿಯ ಅನುಮತಿ ನೀಡಲಾಗುವುದಿಲ್ಲವೆಂದು ಹಾಗೂ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕಾಗಿ ವಿಶ್ವವಿದ್ಯಾಲಯಕ್ಕೆ ಅನುಮತಿಗಾಗಿ ಕಳುಹಿಸಬಾರದೆಂದು ತಿಳಿಸಲಾಗಿದೆ.

Lokesh.N
ಕುಲಸಚಿವರು(ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಗೆ,

ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.